# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 01-10-2022 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ವಿನಾಯಕ ವಿ ನಾಯ್ಕ್ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಜಿ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
5. ಶ್ರೀ ಜೋಶ್ವಾ, ಕರ ವಸೂಲಿಗಾರರು,
6. ಕೆ ಶೀಲಾ, ಕಲ್ಯಾಣ ಇಲಾಖೆ,
7. ಶ್ರೀ ಪ್ರವೀಣ್.ಕೆ, ಮಾರ್ಷಲ್,
8. ಶ್ರೀ ಮಂಜುನಾಥ, ಸಹಾಯಕ ಅಭಿಯಂತರರು, ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
9. ಶ್ರೀ ಮುರುಳೀಧರ್, ಸ್ಥಳೀಯರು,
10. ಶ್ರೀ ಕೆ.ಸಿ ಮಂಜುನಾಥ, ಸ್ಥಳೀಯರು,
11. ಶ್ರೀ ವಿಜಯೇಂದ್ರ ಶೆಟ್ಟಿ, ಸ್ಥಳೀಯರು
12. ಶ್ರೀ ವಿ ಮುರುಗದಾಸ್, ಸ್ಥಳೀಯರು,
13. ಶ್ರೀ ಕಾರೂನ್, ಸ್ಥಳೀಯರು,
14. ಶ್ರೀ ಕೆಂಪರಾಜ್, ಸ್ಥಳೀಯರು,
15. ಶ್ರೀ ಕುಮಾರ್, ಸ್ಥಳೀಯರು
16. ಶ್ರೀ ಆರ್.ಪಾಂಡಿಯನ್, ಸ್ಥಳೀಯರು,
17. ಶ್ರೀ ಗಿರೀಶಾ ಯಾದವ.ಎ.ಎಂ, ಸ್ಥಳೀಯರು,
18. ಶ್ರೀ ಪೂರ್ಣಚಂದ್ರ, ಸ್ಥಳೀಯರು ಮಾತನಾಡುತ್ತಾ,
19. ಶ್ರೀ ಎ.ಎಂ ಘನಶ್ಯಾಮ್ ಯಾದವ್, ಸ್ಥಳೀಯರು,
20. ಶ್ರೀ ಮೋಹನ್ ಕುಮಾರ್.ಜಿ, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ನೋಡೆಲ್ ಅಧಿಕಾರಿಯವರು ತಮ್ಮ ಕಿರು ಪರಿಚಯವನ್ನು ಸಭೆಯಲ್ಲಿ ನೆರೆದಿದ್ದ ಸದಸ್ಯರಿಗೆ ತಿಳಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಕೆಂಪರಾಜ್, ಸ್ಥಳೀಯರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ ಮುನಿಸ್ವಾಮಪ್ಪ ಅಡ್ಡರಸ್ತೆಯನ್ನು ಚರಂಡಿ ಮತ್ತು ರಸ್ತೆಯನ್ನು ಅಭಿವೃದ್ಧಿಪಡಿಸಬೇಕೆಂದು ಹಾಗೂ ಅಭಿವೃದಿಪಡಿಸಲು ತೆಗೆದುಕೊಳ್ಳುವ ಅವಧಿಯನ್ನು ತಿಳಿಸಲು ಸಭೆಯಲ್ಲಿ ತಿಳಿಸಿದರು.

➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**2) ಶ್ರೀ ಆರ್.ಪಾಂಡಿಯನ್, ಸ್ಥಳೀಯರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ ಬಂಡೆ ಪಾರ್ಕ್‌ನಲ್ಲಿ ಪೋಲಿ ಹುಡುಗರು ಡ್ರಗ್ಸ್ ಮತ್ತು ಗಾಂಜಾ ಸೇವನೆ ಮಾಡುತ್ತಿರುತ್ತಾರೆ, ಇದನ್ನು ಪೊಲೀಸ್ ಇಲಾಖೆಯವರು ಕ್ರಮ ಕೈಗೊಂಡು ಪೊಲೀಸ್ ಗಸ್ತನ್ನು ಹಾಕಿ, ಇದನ್ನು ತಡೆಯಬೇಕೆಂದು ಸಭೆಗೆ ತಿಳಿಸಿದರು.

➢ (ಕ್ರಮ:- ಪೊಲೀಸ್ ಇನ್ಸ್‌ಪೆಕ್ಟರ್, ಬಾಣಸವಾಡಿ ಪೊಲೀಸ್ ಠಾಣೆ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯನ್ನು ಸಾರ್ವಜನಿಕರಿಗೆ ಚುನಾವಣಾ ಗುರುತಿನ ಚೀಟಿಗಳಿಗೆ ಆಧಾರ್ ಜೋಡಣೆ ಮಾಡಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಒಂದು ಜನಜಾಗೃತಿ ಮೇಳವನ್ನು ಆಯೋಜಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಕಂದಾಯ ಅಧಿಕಾರಿ, ಮಾರುತಿಸೇವಾನಗರ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮೆರಾಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಿರ್ವಹಣೆ ಮಾಡಿ, ಪಾಲಿಕೆಯ ಸುಪರ್ದಿಗೆ ತೆಗೆದುಕೊಳ್ಳಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- 1ನೇ ಅಡ್ಡರಸ್ತೆ, ನೆಹರು ರಸ್ತೆಯ ಕಾರ್ನರ್‌ನಲ್ಲಿರುವ ಬಿರಿಯಾನಿ ಹೋಟೆಲ್ ಹಾಗೂ ಜ್ಯೂಸ್ ಸೆಂಟರ್ ಅಂಗಡಿ ಮಾಲೀಕರು ಪಾದಾಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು.

  ➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರು ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**3) ಶ್ರೀ ಪೂರ್ಣಚಂದ್ರ, ಸ್ಥಳೀಯರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯಲ್ಲಿ ಅನೇಕ ಕಡೆಗಳಲ್ಲಿ ಇರುವ ವಿದ್ಯುತ್ ಕಂಬಗಳಲ್ಲಿ ಬೀದಿ ದೀಪದ ಸ್ವಿಚ್‌ಗಳು ಇಲ್ಲದೇ ಇರುವುದರಿಂದ ಕೊಂಡಿಗಳನ್ನು ಹಾಕಿ ವಿದ್ಯುತ್ ದೀಪಗಳನ್ನು ಉರಿಸುತ್ತಿದ್ದು, ಅಂತಹ ಸ್ಥಳಗಳಲ್ಲಿ ವಿದ್ಯುತ್ ಸ್ವಿಚ್‌ಗಳನ್ನು ಅಳವಡಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ (ಪೂರ್ವ) ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**4) ಶ್ರೀ ವಿ ಮುರುಗದಾಸ್, ಸ್ಥಳೀಯರು ಮಾತನಾಡುತ್ತಾ,**

- ಮುಂಬರುವ ಅನುದಾನದಲ್ಲಿ 03 ಬೋರ್‌ವೆಲ್‌ಗಳನ್ನು ಪಾಲಿಕೆ ವತಿಯಿಂದ ಮುನಿಸ್ವಾಮಪ್ಪ ರಸ್ತೆ, ಕೆ.ಹೆಚ್.ಬಿ ಕ್ವಾಟ್ರಸ್ ಹಾಗೂ ಸಿ.ಜೆ ಬೇಕರಿ, ಸುಖ್ ಸಾಗರ್ ಹತ್ತಿರ ಕೊರೆಯಲು ಅನುಮೋದನೆ ಮಾಡಿಸಿಕೊಂಡು ಬೋರ್‌ವೆಲ್‌ಗಳನ್ನು ಕೊರೆಯಬೇಕೆಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಕಳ್ಳತನಗಳು ಹಾಗೂ ಪುಂಡ ಪೋಕಿರಿಗಳ ಹಾವಳಿ ಹೆಚ್ಚಾಗಿದ್ದು, ಇದನ್ನು ತಡೆಯಲು ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕೆಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಸಾರ್ವಜನಿಕರ ಗಮನಕ್ಕೆ ಬರುವಂತೆ ನಾಮಫಲಕವನ್ನು ಅಳವಡಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ಸತ್ಯಮೂರ್ತಿ ರಸ್ತೆಯಲ್ಲಿ ಮರದ ಕೊಂಬೆಗಳು ರಸ್ತೆಗೆ ಬಾಗಿಕೊಂಡಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಅರಣ್ಯಾಧಿಕಾರಿ (ಪೂರ್ವ) ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್.ಎಸ್‌ಬಿ ವತಿಯಿಂದ ಸಮರ್ಪಕವಾಗಿ ಕಾವೇರಿ ನೀರು ಬಿಡುತ್ತಿರುವುದಿಲ್ಲ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಲು ಸಭೆಗೆ ತಿಳಿಸಿದರು.

➢ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್.ಎಸ್.ಬಿ ಇಲಾಖೆ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**5) ಶ್ರೀ ಕೆ.ಸಿ ಮಂಜುನಾಥ, ಸ್ಥಳೀಯರು, ರವರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ ಹರ್ಷ ಲೇಔಟ್ ಹಾಗೂ ಕುಳ್ಳಪ್ಪ ಸರ್ಕಲ್‌ನಲ್ಲಿ ಕಳೆದ 2-3 ವಾರಗಳಿಂದ ಬಿಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಸಮರ್ಪಕವಾಗಿ ಕಾವೇರಿ ನೀರು ಬಿಡುತ್ತಿರುವುದಿಲ್ಲ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಲು ಸಭೆಗೆ ತಿಳಿಸಿದರು.

➢ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ವ್ಯಾಪ್ತಿಯ ಅರಳಿಮರ ರಸ್ತೆಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯು ನಡೆಯುತ್ತಿದ್ದು, ಚರಂಡಿಯ ಸ್ಲಾಬ್ ಅನ್ನು ಸರಿಯಾಗಿ ಅಳವಡಿಸದೇ ಇರುವುದರಿಂದ ವಾಹನ ಸವಾರರಿಗೆ ಹಾಗೂ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**6) ಶ್ರೀ ವಿಜಯೇಂದ್ರ ಶೆಟ್ಟಿ, ಸ್ಥಳೀಯರು ರವರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ ಅರಳಿಮರ ರಸ್ತೆಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯು ನಡೆಯುತ್ತಿದ್ದು, ಸದರಿ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಚಿಕನ್ ಅಂಗಡಿಗಳ ಮಾಲೀಕರುಗಳು ಪ್ಲಾಸ್ಟಿಕ್ ನಿಷೇಧಿಸಿದ್ದರೂ ಸಹ, ಎಲ್ಲಾ ಅಂಗಡಿ ಮಾಲೀಕರುಗಳು ಪ್ಲಾಸ್ಟಿಕ್ ಅನ್ನು ಉಪಯೋಗಿಸುತ್ತಿರುವುದು ಕಂಡು ಬಂದಿದ್ದು, ಈ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರು ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**7) ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ ಜಯಲಕ್ಷ್ಮಿ ಶಾಲೆ ರಸ್ತೆ, ಎಂ.ಎಂ.ಇ.ಟಿ ಶಾಲೆ ರಸ್ತೆ, ಐ.ಟಿ.ಸಿ ರಸ್ತೆ ಹಾಗೂ ಅರಳಿಮರ ರಸ್ತೆಯಲ್ಲಿ ರಸ್ತೆ ಗುಂಡಿಗಳು ಬಿದ್ದು, ರಸ್ತೆಗುಂಡಿಗಳನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.

**8) ಶ್ರೀ ಕಾರೂನ್, ಸ್ಥಳೀಯರು ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯ 1ನೇ ಅಡ್ಡರಸ್ತೆ, ವೆಂಕಟೇಶಪ್ಪ ಲೇಔಟ್‌ನಲ್ಲಿ ಪೆಟ್ಟಿ ಅಂಗಡಿ ಮಾಲೀಕರು ಪಾದಾಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಸಾರ್ವಜನಿಕ ಸಂಚಾರಕ್ಕೆ ತೊಂದರೆಯನ್ನು ಉಂಟು ಮಾಡುತ್ತಿದ್ದು, ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು.

- ವಾರ್ಡ್ ವ್ಯಾಪ್ತಿಯ ಕಮ್ಮನಹಳ್ಳಿ ಮುಖ್ಯರಸ್ತೆಯಿಂದ ಬಿಬಿಎಂಪಿ ಕಛೇರಿಗೆ ಹೋಗುವ 1ನೇ ಅಡ್ಡರಸ್ತೆ, (ಮಾರುತಿ ಸೇವಾನಗರ ಉಪವಿಭಾಗ) ಬಿಬಿಎಂಪಿ ಕಛೇರಿ ರಸ್ತೆಯನ್ನು ಸ್ಟೀಲ್ ಅಂಗಡಿಯವರು ಪ್ರತಿನಿತ್ಯ ಸ್ಟೀಲ್ ಪೈಪ್‌ಗಳನ್ನು ಅಡ್ಡಾದಿಡ್ಡಿಯಾಗಿ ವಾಹನಗಳಿಗೆ ತುಂಬಿಸುತ್ತಿದ್ದು, ಇದರಿಂದ ಈ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದರು.

- (ಕ್ರಮ:– ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರು ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

- ವಾರ್ಡ್ ಸಂಖ್ಯೆ.29 ರಲ್ಲಿ ಎಲ್ಲಾ ಸ್ಥಳಗಳಲ್ಲಿ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಿರುವುದು ಕಂಡುಬಂದಿದ್ದು, ನಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಇರುವುದಿಲ್ಲ, ಆದುದರಿಂದ ಕೂಡಲೇ ಕಮ್ಮನಹಳ್ಳಿ ವಾರ್ಡಿನಲ್ಲಿ ಹೊಸದಾಗಿ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು.

- (ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ (ಪೂರ್ವ) ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**9) ಶ್ರೀ ಗಿರೀಶ್ ಯಾದವ್ ರವರು ಮಾತನಾಡುತ್ತಾ,**

- ಕಮ್ಮನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಳವಡಿಸಿರುವ ಎಲ್ಲಾ ಕೇಬಲ್‌ಗಳನ್ನು ತೆರವುಗೊಳಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.28 ರವರು ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರು ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**10) ಶ್ರೀ ಮೋಹನ್ ಕುಮಾರ್.ಜಿ, ಸ್ಥಳೀಯರು,**

- ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು 18 ವಯೋಮಾನದ ಹುಡುಗರು ರಸ್ತೆಗಳಲ್ಲಿ ದೂಮಪಾನ ಮಾಡುತ್ತಿದ್ದು, ಇದನ್ನು ಪೊಲೀಸ್ ಇಲಾಖೆಯವರು ತಡೆಗಟ್ಟಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

➢ (ಕ್ರಮ:- ಪೊಲೀಸ್ ಇನ್ಸ್‌ಪೆಕ್ಟರ್, ಬಾಣಸವಾಡಿ ಪೊಲೀಸ್ ಠಾಣೆ ರವರು ಈ ಬಗ್ಗೆ ಕ್ರಮವಹಿಸಿ, ಮುಂದಿನ ವಾರ್ಡ್ ಸಮಿತಿ ಸಭೆಗೆ ಮಾಹಿತಿ ತಿಳಿಸುವುದು.)

**11) ಮಾನ್ಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು** ಕೊನೆಯದಾಗಿ ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,**

**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

1/10/22

**ಪ್ರತಿಯನ್ನು**

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
11) ಸಹಾಯಕ ಕಂದಾಯ ಅಧಿಕಾರಿ. ಮಾರುತಿ ಸೇವಾ ನಗರ ಉಪವಿಭಾಗ
12) ಕಲ್ಯಾಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
13) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
14) ಪೋಲಿಸ್ ಇನ್ಸ್‌ಪೆಕ್ಟರ್, ಬಾಣಸವಾಡಿ
15) ಪೋಲಿಸ್ ಇನ್ಸ್‌ಪೆಕ್ಟರ್,(ಸಂಚಾರಿ), ಬಾಣಸವಾಡಿ.
16) ಕಛೇರಿ ಪ್ರತಿ.